2. 2006ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪರಿಶೀಲನೆ, ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ವಿವರ ಪಟ್ಟಿಕೆ) ನಿಯಮವನ್ನು ರಚಿಸಿ ದಿನಾಂಕ 14.08.2006ರಂದು ಹೊರಡಿಸಲಾದ ಇಡಿ 74 ವಿವಿಧ 2004ನೇ ಸಂಖ್ಯೆಯ ಅಧಿಸೂಚನೆ.

3. 2005ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ವಹಿಸಿಕೊಳ್ಳುವುದು, ಅಧಿಯಾಚನೆ ಮತ್ತು ಸ್ವಾಧೀನತೆ (Takingover of Management, Requistioning and Acquisition) ನಿಯಮವನ್ನು ದಿನಾಂಕ 28.10.2006ರಂದು ಹೊರಡಿಸಲಾದ ಇಡಿ 43 ವಿವಿಧ 2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

V. ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ಅವರ ಪರವಾಗಿ

ಭಾರತ ಸಂವಿಧಾನದ 213(2) (ಎ) ಅನುಚ್ಛೇದದ ಮೇರೆಗೆ:

1. ಕರ್ನಾಟಕ ಭೂ ಕಂದಾಯ (ತಿದ್ದುಪಡಿ)ಗೆ ಸಂಬಂಧಿದಂತೆ ಹೊರಡಿಸಲಾದ ಸಂವ್ಯಶಾಇ 68 ಶಾಸನ 2005 ದಿನಾಂಕ 26.12.2006ರ ಅಧ್ಯಾದೇಶ ಸಂಖ್ಯೆ 3.

2. ಕರ್ನಾಟಕ ಭೂ ಕಂದಾಯ ಮತ್ತು ಕೆಲವು ಇತರೆ ಕಾನೂನುಗಳು (ತಿದ್ದುಪಡಿ)ಗೆ ಸಂಬಂಧಿಸಿದಂತೆ ದಿನಾಂಕ 27.12.2006ರಂದು ಹೊರಡಿಸಲಾದ ಸಂವ್ಯಶಾಇ 23 ಶಾಸನ 2006ರ ಅಧ್ಯಾದೇಶ ಸಂಖ್ಯೆ 5ನ್ನು ಮಂಡಿಸುತ್ತೇನೆ.

6. ವರದಿಗಳನ್ನೊಪ್ಪಿಸುವುದು

1. ಶ್ರೀ ಎ.ಬಿ..ಪಾಟೀಲ್: ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 2005–06ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 7 ಮತ್ತು 8 ನೇ ವರದಿಗಳನ್ನೊಪ್ಪಿಸುತ್ತೇನೆ.

2. ಅಧ್ಯಕ್ಷರು: ಡಾ. ಕೆ. ಅನ್ನದಾನಿ (ಮಾನ್ಯ ಸದಸ್ಯರು ಇಲ್ಲದೆ ಇರುವುದರಿಂದ ಅವರ ಪರವಾಗಿ) 2005–06ನೇ ಸಾಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ನಾಲ್ಕನೇ ವರದಿಯನ್ನು ಒಪ್ಪಿಸುತ್ತೇನೆ.